ವಿಧಾನಸಭಾ ಕ್ಷೇತ್ರವಾರು ಫಲಾನುಭವಿಗಳ ಸಂಖ್ಯೆ ಸಧ್ಯದಲ್ಲಿ ದೊರೆಯುವುದಿಲ್ಲ. ಆದರೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ವಲಯವಾರು ನಿಗದಿ ಪಡಿಸಿರುವ ಫಲಾನುಭವಿಗಳ ಸಂಖ್ಯೆಯು ಈ ಕೆಳಕಂಡಂತಿದೆ.

ಕ್ರ.ಸ.	ವಲಯವಾರು ಹೆಸರು	ಚಾಲ್ತಿಯಲ್ಲಿರುವ ಹಳದಿ ಪಡಿತರ ಚೀಟಿ	ನಿಗದಿ ಪಡಿಸಿರುವ ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿ
1.	ಉತ್ತರವಲಯ	24376	2590
2.	ದಕ್ಷಿಣವಲಯ	47367	5035
3.	ಪೂರ್ವವಲಯ	17452	1855
4.	ಪಶ್ಚಿಮವಲಯ	34389	3655
5.	ಕೇಂದ್ರವಲಯ	13996	1485
	ಒಟ್ಟು	137580	14620

ಇ) ಯೋಜನೆಯನ್ನು ಜಾರಿಗೊಳಿಸುವ ಪ್ರಕ್ರಿಯೆಯು ಫಲಾನುಭವಿಗಳನ್ನು ಗುರುತಿಸುವಿಕೆ, ಗುರುತಿಸಲ್ಪಟ್ಟ ಫಲಾನುಭವಿಗಳನ್ನು ಗ್ರಾಮಸಭೆಗಳಲ್ಲಿ ಸ್ಥಿರೀಕರಿಸುವಿಕೆ, ಪಡಿತರ ಚೀಟಿ ವಿತರಣೆ, ಕೇಂದ್ರ ಸರ್ಕಾರದಿಂದ ಆಹಾರಧಾನ್ಯ ಬಿಡುಗಡೆ ಮತ್ತು ಅಂತಿಮವಾಗಿ ಆಹಾರಧಾನ್ಯವನ್ನು ನ್ಯಾಯಬೆಲೆ ಅಂಗಡಿಗಳಿಗೆ ಹಂಚಿಕೆ ಮಾಡುವುದು ಮುಂತಾದ ಕಾರ್ಯಗಳನ್ನು ಒಳಗೊಂಡಿದೆ. ಹೊಸದಾಗಿ ಗುರುತಿಸಲ್ಪಟ್ಟ ಕುಟುಂಬಗಳಿಗೆ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಆದಷ್ಟು ಬೇಗನೆ ಮುಕ್ತಾಯಗೊಳಿಸಲಾಗುವುದು.

ಬಬಲೇಶ್ವರ ಏತನೀರಾವರಿ ಯೋಜನೆಯ ಮಂಜೂರಾತಿ ಬಗ್ಗೆ

330 (3061) : ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮೇಗೌಡ (ತಿಕೋಟ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಬಲೇಶ್ವರ ಏತ ನೀರಾವರಿ ಯೋಜನೆಯನ್ನು ಮಂಜೂರು ಮಾಡಲಾಗಿದೆಯೇ;

ಆ) ಯೋಜನೆಯ ಸಮೀಕ್ಷಾ ಕಾರ್ಯ ಮತ್ತು ಅನ್ವೇಷಣಾ ಕೆಲಸಗಳನ್ನು ಪೂರ್ಣಗೊಳಿಸಲಾಗಿದೆಯೇ;

ಇ) ಪೂರ್ಣಗೊಳಿಸಿದಲ್ಲಿ, ಈ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆಯೇ;

ಈ) ಯೋಜನೆಯನ್ನು ಪ್ರಾರಂಭಿಸಲು ಹಾಕಿಕೊಂಡ ಕಾಲಮಿತಿ ಏನು?

ಶ್ರೀ ಹೆಚ್. ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಬಬಲೇಶ್ವರ ಏತ ನೀರಾವರಿ ಯೋಜನೆಯ ಪ್ರಾಥಮಿಕ ತನಿಖಾ ವರದಿಗೆ ಸರ್ಕಾರದಿಂದ ಅನುಮೋದನೆ ನೀಡಲಾಗಿದ್ದು, ವಿವರವಾದ ಸಮೀಕ್ಷಾ ಕಾರ್ಯ ಹಾಗೂ ಅನ್ವೇಷಣೆಗೆ ಅನುಮೋದನೆ ನೀಡಲಾಗಿದೆ.

ಆ) ಪೂರ್ಣಗೊಳಿಸಲಾಗಿದೆ.

ಇ) ವಿವರವಾದ ಯೋಜನಾ ವರದಿಯ ತಯಾರಿಕೆಯು ಮುಕ್ತಾಯದ ಹಂತದಲ್ಲಿರುತ್ತದೆ.

ಈ) ವಿವರವಾದ ಯೋಜನಾ ವರದಿಗೆ ಅನುಮೋದನೆಯನ್ನು ನೀಡಿ, ಇದೇ ಆರ್ಥಿಕ ಸಾಲಿನಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಅ) ತಡೆ ಹಿಡಿಯಲಾದ ಪ್ರಶ್ನೆಗಳು :

ಅಧ್ಯಕ್ಷರು : ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಗೌಡರು : ಅವರೂ ಇಲ್ಲ.

ಇ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ದಿನಾಂಕ 1-8-03ರ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಪಟ್ಟಿಯಲ್ಲಿರುವ 87 ಪ್ರಶ್ನೆಗಳ ಪೈಕಿ 75 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ. (ಅನುಬಂಧ -1)

ಅಧ್ಯಕ್ಷರು : ಮಂಡಿಸಲಾಯಿತು. ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

4. ನಿಲುವಳಿ ಸೂಚನೆ ಮಂಡನೆಗೆ ಅವಕಾಶ ನೀಡಬೇಕೆಂದು ವಿರೋಧ ಪಕ್ಷದವರಿಂದ ಧರಣಿ ಮುಂದುವರಿಕೆ

ಗೊಂದಲ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಇವರು ಹೀಗೆ ಗೂಂಡಾಗಿರಿ ಮಾಡುವುದಕ್ಕಾಗುವುದಿಲ್ಲ. ಸದನ ನಡೆಸುವುದೆಂದರೆ ಗೂಂಡಾಗಿರಿ ಮಾಡಿ ನಡೆಸುವುದಲ್ಲ. ನಿಯಮಗಳ ಪ್ರಕಾರ ನಡೆಸಬೇಕು.

ಗೊಂದಲ

ಅಧ್ಯಕ್ಷರು : ತಾವು ಕುಳಿತುಕೊಳ್ಳುತ್ತಿರೋ ಇಲ್ಲವೋ? ನೀವು ನಿಮ್ಮ ನಿಮ್ಮ ಸ್ಥಳಗಳಿಗೆ ಹೋಗಿ ಮಾತನಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಇದ್ದೇನಿದು? ನಿನ್ನೆ ಚರ್ಚೆಯಾಯಿತು ಚರ್ಚೆಯಾದ ಮೇಲೆ ನಿಲುವಳಿ ಸೂಚನೆ ತರುವುದೇನೆಂದರೆ ಹೇಗೆ? ಅವರು ಅದನ್ನು ಬೇರೆ ಫಾರಂನಲ್ಲಿ ಬೇಕಾದರೆ ತೆಗೆದುಕೊಳ್ಳಲಿ;

ಅಧ್ಯಕ್ಷರು : ನಿನ್ನೆ ಪ್ರಸ್ತಾಪವಾಗಿದೆ. ನಾನೇ ಹೋಗಿ ಇನ್‌ಸ್ಪೆಕ್ಷನ್ ಮಾಡಿಕೊಂಡು ಬರುತ್ತೇನೆ ಎಂದು ಮಂತ್ರಿಗಳು ಹೇಳಿದ್ದಾರೆ. ಸಂಬಂಧಪಟ್ಟ ಲೋಕಲ್ ಎಂ.ಎಲ್.ಎ. ಯವರು ನಿನ್ನೆ ವಿಷಯ ಎತ್ತಿದ್ದಾರೆ. ಆಗ ನೀವು ನೋಡಲಿಲ್ಲ ಅಷ್ಟೇ. ನೀವು ಎಲ್ಲಿದ್ದಿರೋ? ಮಾನ್ಯ ಕರಡಿ ಸಂಗಣ್ಣನವರು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಮಾನ್ಯ ಮಂತ್ರಿಗಳೂ ಉತ್ತರ ಹೇಳಿದ್ದಾರೆ. ಈಗ ನಾನು ಅಲೋ ಮಾಡುವುದಿಲ್ಲ. ನೀವು ಪ್ರೊಸೀಜರ್‌ಗೆ ಎಗೆನೆಸ್ಟ್‌ಆಗಿ ಹೋಗುತ್ತಿದ್ದೀರಿ. ಈ ವಿಷಯ ನಿನ್ನೆ ಪ್ರಸ್ತಾಪವಾಗಿದೆ.

ಗೊಂದಲ

ಅಧ್ಯಕ್ಷರು : ಅವರು ಹೇಳುವುದನ್ನು ಕೇಳಿ. ನಿನ್ನೆ ಈ ವಿಷಯ ಚರ್ಚೆಯಾಗಿದೆ. ಸಂಬಂಧಪಟ್ಟ ಎಂ.ಎಲ್.ಎ ರವರು ಎತ್ತಿದ್ದಾರೆ. ಮಾನ್ಯ ಮಂತ್ರಿಗಳು, ನಾನೇ ಹೋಗಿ ಇನ್‌ಸ್ಪೆಕ್ಟ್ ಮಾಡಿಕೊಂಡು ಬಂದು ಉತ್ತರವನ್ನು ಕೊಡುತ್ತೇನೆ ಎಂದು ಹೇಳಿದ್ದಾರೆ ಈಗ ಪುನ: ಅದನ್ನೇ ಎರಡನೇ ಸಲ ಏಕೆ ಎತ್ತಬೇಕು? ಈಗ ನಾನು ಅಲೋ ಮಾಡುವುದಿಲ್ಲ. ನಿನ್ನೆ ವಿಷಯ ಪ್ರಸ್ತಾಪ ಆಗಿದೆ. ಪ್ರೊಸೀಡಿಂಗ್ಸ್